ಪ್ರಬಂಧ

# ನೆಲ-ಆಕಾಶ-ನೀಲಿ



**ಕೃಷ್ಣಮೂರ್ತಿ ಹನೂರು**

ಕಲೆ: ವಿಶ್ವನಾಥ್ ಎ.ಎಸ್.

ನ್ಯೂಯಾರ್ಕಿನ ಮೆಟ್ರೋಪಾಲಿಟನ್ ವಸ್ತು ಸಂಗ್ರಹಾಲಯದ ಮುಂದೆ ಬಂದರೆ ಅಲ್ಲಿ ಅಸಂಖ್ಯಾತ ಜನಸಮೂಹ. ಆ ಜಂಗುಳಿಯಲ್ಲಿ ಚೀನಾ, ಜಪಾನಿನವರು ಎದ್ದು ಕಾಣುತ್ತಿದ್ದರು. ಗೇಟಿನಲ್ಲಿ ಆಫ್ರಿಕನ್, ಅಮೆರಿಕನ್‌ನವರಲ್ಲದೆ ಇತರ ಸಹಾಯಕರೂ ಇದ್ದು, ಪ್ರೇಕ್ಷಕ ಕುತೂಹಲಿಗಳಿಗೆ ಸಂಗ್ರಹಾಲಯದ ಯಾವ್ಯಾವ ಭಾಗದಲ್ಲಿ ಯಾವೆಲ್ಲ ವಸ್ತು, ಚಿತ್ರ, ಶಿಲ್ಪ ಮತ್ತಿನ್ನೇನೇನು ವಿಶೇಷಗಳಿವೆ ಎಂಬುದರ ಮಾಹಿತಿ ನೀಡುತ್ತ ಕರಪತ್ರಗಳನ್ನೂ ಹಂಚುತ್ತಿದ್ದರು. ಪ್ರವೇಶದ್ವಾರದ ಗೋಡೆಗಳ ಮೇಲೂ ಯಾವ್ಯಾವ ಮಹಡಿಯಲ್ಲಿ ಏನೇನು ಕಾಣಬಹುದು ಎಂಬುದರ ಫಲಕಗಳಿದ್ದವು.

ಸಂಗ್ರಹಾಲಯದ ಮುಂಭಾಗದಲ್ಲಿಯೇ ಗ್ರೀಕ್ ಶಿಲ್ಪಗಳು ನೋಡುಗರೆಲ್ಲರ ಗಮನ ಸೆಳೆಯುವಂತಿದ್ದವು. ನಾವೆಲ್ಲರೂ ಬಾಲ್ಯ ಕಾಲದಿಂದ ಚರಿತ್ರೆಯ ಪುಸ್ತಕಗಳಲ್ಲಿ ಕಾಣುತ್ತ ಬಂದಂತೆ ಅಲೆಗ್ಸಾಂಡರ್ ಯೋಧನ ಮಾದರಿಯ ಶಿಲ್ಪಗಳು ಎದುರಾದವು. ನೋಡುವಲ್ಲಿ ಮೊದಲ ನೋಟಕ್ಕೆ ಭಯ ಹುಟ್ಟಿಸುವಂಥವಾಗಿ ಇತಿಹಾಸದ ಆದಿಮ ಕಥೆಗಳನ್ನು ಹೇಳುವ ರೀತಿಯಲ್ಲಿದ್ದವು. ಹೆಂಗಸಿನ ರುಂಡವನ್ನು ಕತ್ತರಿಸಿ ಎಡಗೈಯ್ಯಲ್ಲಿ, ಕತ್ತಿಯನ್ನು ಬಲಗೈಯ್ಯಲ್ಲಿ ಹಿಡಿದ ಬಲಾಢ್ಯ ಪುರುಷನೊಬ್ಬನ ಶಿಲ್ಪ ಅಲ್ಲಿ ಎದ್ದು ಕಾಣುತ್ತಿತ್ತು. ಪುರಾಣ ಅಥವಾ ಇತಿಹಾಸ ಕಾಲದಲ್ಲಿ ಜರುಗಿಹೋದ ಎಂತೆಂಥ ಕ್ರೌರ್ಯ ಮತ್ತು ದುರಂತ ಕಥನಗಳನ್ನು ಅದು ಹೇಳುತ್ತದೆಯೋ? ಹಾಗೆ ನೋಡಿಕೊಂಡರೆ ಜಗತ್ತಿನ ಯಾವುದೇ ಮೂಲೆಯ ಆದಿಮ ಇತಿಹಾಸದ ಕಥೆಗಳು ಈ ಬಗೆಯ ಭಯಂಕರ ಕೃತ್ಯಗಳಿಂದಲೇ ಆರಂಭವಾಗುತ್ತದೆನಿಸುತ್ತದೆ. ತೋಳು ಹುರಿಯಿರುವ ಗಂಡು ಸಮೂಹ ಕಾಡಿನಲ್ಲಿ ಪ್ರಾಣಿಗಳನ್ನು ಬೇಟೆಯಾಡಿದಂತೆ ತನ್ನ ಸುತ್ತಿನ ದುರ್ಬಲ ಜೀವಿಗಳನ್ನೂ ಬಲಿಗೊಳ್ಳುತ್ತಲೇ ಬಂದಿರಬೇಕು. ಈ ಬಗೆಯ ಕ್ರೌರ್ಯಕ್ಕೆ ಆಮೇಲಾಮೇಲೆ ಪರಾಕ್ರಮ, ಶೌರ್ಯ ಎಂಬ ವಿಶೇಷಣಗಳು ಸೇರಿ, ಅದನ್ನು ರಾಜ್ಯ ಸಾಧನೆಯ ಧರ್ಮಯುದ್ಧವೆಂದು ಕರೆಯಲಾಯಿತು. ಅದಕ್ಕೆ ಆರಾಧನಾ ಭಾವ, ಶಾಶ್ವತ ಸ್ವರ್ಗಜೀವನದ ಕಲ್ಪನೆಯೂ ಸೃಷ್ಟಿಯಾಗಿ ಅದು ಹಿಂಸೆಯ ಗಂತವ್ಯ ಸ್ಥಿತಿ ಮುಟ್ಟಿತು!

ವಸ್ತು ಸಂಗ್ರಹಾಲಯದ ಮುಖಭಾಗದಲ್ಲೇ ಕಂಡ ಭಯಂಕರ ಪುರುಷ, ಗ್ರೀಕ್ ಮಹಾ ಕಾವ್ಯವೆನಿಸುವ ಇಲಿಯಡ್, ಇನಿಯಡ್‌ನ ಅಖಿಲಿಸನೋ, ಹೆಕ್ಟೇರನೋ, ಅಗಮೆಮ್ನಾನನೋ ಅಥವಾ ಅವರೆಲ್ಲರ ಪ್ರತಿನಿಧಿಯೋ ಎನಿಸುವಂತಿದ್ದನು. ಕನ್ನಡದಲ್ಲಿಯ ಕಾವ್ಯ, ಶಾಸನಗಳಲ್ಲಿಯೂ ರಾಜ ಮಹಾರಾಜರೆಂಬುವರ ಪುರುಷ ಪರಾಕ್ರಮಗಳು ದಿಗಿಲು ಹುಟ್ಟಿಸುವಂತಿವೆ. ಪಂಪನ ಆಶ್ರಯದಾತ ಅರಿಕೇಸರಿ ಪರಬಲದ ನೆತ್ತರ ಕಡಲಿನಲ್ಲಿ ಜಿಗುಳೆಯಂತೆ ಮುಳುಗೇಳುತ್ತಿದ್ದನಂತೆ. ಅಷ್ಟೇ ಅಲ್ಲ ಸ್ವತಃ ಪಂಪನೇ ಚತುರಂಗ ಬಲ ಭಯಂಕರನಾಗಿ ರಣರಂಗದಲ್ಲಿ ಒಂದೊಂದೇ ಏಟಿಗೆ ಒಂದೊಂದು ತಲೆ ಹಾರಿಸುತ್ತಿದ್ದನಂತೆ! ರನ್ನನೂ ತನ್ನ ಆಶ್ರಯದಾತ ಸತ್ಯಾಶ್ರಯ ತೈಲಪನನ್ನು ಕುರಿತು ಅದನ್ನೇ